ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ

ಶ್ರೀಶಾರದಾಪತ್ರ

(ತ್ರೈಮಾಸಿಕ ಪತ್ರಿಕೆ)


ಸಂಪುಟ : ೦೭
ಸಂಚಿಕೆ : ೧೭

೧೭ (ಖಾಸಗಿ ಪ್ರಸಾರಕ್ಕಾಗಿ ಮಾತ್ರ) ಜನವರಿ – ಮಾರ್ಚ್ ೨೦೧೧

ಸಂಪಾದಕರು
ಎಸ್.ವಿ. ಶ್ರೀನಿವಾಸರಾವ್

ಪರಿವಿಡಿ

ಕರ್ನಾಟಕದ ಜನಪ್ರಿಯ ಮುಖ್ಯಮಂತ್ರಿ, ಗೌರವಾನ್ವಿತ ಡಾ. ಬಿ.ಎಸ್. ಯಡ್ಯೂರಪ್ಪ ಅವರಲ್ಲಿ ಸವಿನಯ ವಿನಂತಿ



ದಿನಾಂಕ ೧೬-೧೨-೨೦೦೯ ರಂದು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ವಿದ್ವಾಂಸರುಗಳಾದ ಡಾ. ಚಿದಾನಂದಮೂರ್ತಿ, ನಾಡೋಜ ಪ್ರೊ. ಜಿ ವೆಂಕಟಸುಬ್ಬಯ್ಯ, ಪ್ರೊ. ಎಲ್. ಎಸ್. ಶೇಷಗಿರಿರಾವ್, ಡಾ. ಪಿ. ವಿ. ನಾರಾಯಣ ಮುಂತಾದವರು ತಮ್ಮನ್ನು ಭೇಟಿ ಮಾಡಿ ಪ್ರತಿಷ್ಠಾನದ ಕಾರ್ಯಚಟುವಟಿಕೆ ಹಾಗೂ ಆಗಿರುವ ಪ್ರಗತಿಯನ್ನು ವಿವರಿಸಿ ಮುಂದಿನ ಯೋಜನೆಯನ್ನು ಮಂಡಿಸಿದಾಗ, ತಾವು ಈ ಬಗ್ಗೆ ಮೆಚ್ಚುಗೆ ಸೂಚಿಸಿ ೫೦ ಲಕ್ಷ ರೂಪಾಯಿಗಳ ಅನುದಾನವನ್ನು ಘೋಷಿಸಿ, ೨ ಕಂತುಗಳಲ್ಲಿ ಇದನ್ನು ನೀಡಲು ಕಾರ್ಯದರ್ಶಿಗಳಿಗೆ ಆದೇಶಿಸಿದ್ದಿರಿ. ಆದರೆ ಈವರೆವಿಗೂ ನಮಗೆ ಈ ಹಣ ಮಂಜುರಾಗಿ ಬಂದಿರುವುದಿಲ್ಲವೆಂದು ತಿಳಿಸಲು ಸಂಕೋಚಿಸುತ್ತೇವೆ.

'ಕನ್ನಡದ ಕಣ್ವ' ಬಿ.ಎಂ.ಶ್ರೀ. ಅವರ ಹೆಸರಿನಲ್ಲಿ ಪ್ರೊ. ಎಂ. ವಿ. ಸೀತಾರಾಮಯ್ಯ ಅವರು ಸ್ಥಾಪಿಸಿರುವ ಈ ಪ್ರತಿಷ್ಠಾನ ನಿರಂತರ ಕನ್ನಡ ನಾಡು-ನುಡಿಯ ಸೇವೆಯಲ್ಲಿ ನಿರತವಾಗಿದೆ.

ಕನ್ನಡದ ಬಗ್ಗೆ ಅತ್ಯಂತ ಕಾಳಜಿ ಇರುವ ತಾವು ಶೀಘ್ರವೇ ೫೦ ಲಕ್ಷದ ಅನುದಾನವನ್ನು ಬಿಡುಗಡೆ ಮಾಡಿ ಉಪಕರಿಸಬೇಕೆಂದು ಸವಿನಯಪೂರ್ವಕವಾಗಿ ವಿನಂತಿಸಿಕೊಳ್ಳುತ್ತಿದ್ದೇವೆ.

ನಮಸ್ಕಾರಗಳೊಂದಿಗೆ

ನಾಡೋಜ ಡಾ॥ ಜಿ. ನಾರಾಯಣ,
ಗೌ॥ ಅಧ್ಯಕ್ಷರು

ಪ್ರೊ. ಡಿ. ಲಿಂಗಯ್ಯ
ಅಧ್ಯಕ್ಷರು

ವಿಳಾಸ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ,
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು – ೧೯
ದೂರವಾಣಿ : ೨೬೬೧೫೮೭೭/೨೬೬೭೬೭೭೩
ಇಮೇಲ್: bmsritrust@gmail.com

ಶಾಖೆ
ಬಿ.ಎಂ.ಶ್ರೀ. ಶತಮಾನೋತ್ಸವ ಭವನ
ಬೆಳ್ಳೂರು, ನಾಗಮಂಗಲ ತಾ॥, ಮಂಡ್ಯ ಜಿಲ್ಲೆ



೧೧-೨-೨೦೧೧ ಪ್ರೊ. ಕೆ. ಎಸ್. ದೇಶಪಾಂಡೆ ಅವರ ಸ್ವಗೃಹದಲ್ಲಿ ಅವರನ್ನು ಸನ್ಮಾನಿಸಿದಾಗ



ಡಾ. ಬೇಂದ್ರೆಯವರ ಮನೆಯ ಬಳಿ ಅಂಬಿಕಾತನಯದತ್ತ ವೇದಿಕೆ, ಧಾರವಾಡ ೧೧-೨-೧೧

ಸಂಪಾದಕೀಯ

'ಗ್ರಂಥವು ಬೇಕಾದಾಗ, ಬೇಕಾದ ಹೊತ್ತಿನಲ್ಲಿ, ಬೇಕಾದ ಸ್ಥಳದಲ್ಲಿ ಮತ್ತು ಬೇಕಾದ ಪರಿಸ್ಥಿತಿಯಲ್ಲಿ ತಿಳುವಳಿಕೆ ನೀಡುವ ಸದಾಸಿದ್ಧ ಜ್ಞಾನನಿಧಿ' ಎಂದು ಶ್ರೀ ಎಸ್. ಆರ್. ಗುಂಜಾಳ್ ಹೇಳಿದರೆ, 'ಗ್ರಂಥಾಲಯವು ಶಿಕ್ಷಣದ ಹೃದಯವಾಗಿದೆ' ಎನ್ನುತ್ತಾರೆ ಪೌಲ್‌ಬಕ್. ಈ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಗ್ರಂಥಾಲಯಗಳ ಅವಶ್ಯಕತೆ ಹಾಗೂ ಮಹತ್ವ ಅರಿವಾಗುತ್ತದೆ.

ಗ್ರಂಥಾಲಯ ಇಂದು ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ವಲಯದ ಬೌದ್ಧಿಕ ಆಸ್ತಿ. ಇದರ ಸಂಗ್ರಹ, ಸಂರಕ್ಷಣೆ, ಸಾಹಿತಿಗಳ, ಸಾಹಿತ್ಯಾಸಕ್ತರ ಹಿತಾಸಕ್ತಿಗೆ ಒಳಪಡುವ ಮುಖ್ಯ ಕಾರ್ಯವಾಗಿದೆ.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಕನ್ನಡ ವಿಶ್ವವಿದ್ಯಾಲಯ ಹಂಪಿಯ ಮಾನ್ಯತೆ ಪಡೆದು ಎಂ.ಫಿಲ್ ಮತ್ತು ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿದೆ. ಹಳಗನ್ನಡ ಸಾಹಿತ್ಯಾಸಕ್ತರಿಗೆ ಹತ್ತಾರು ವರ್ಷಗಳಿಂದ ತರಗತಿಗಳನ್ನು ನಡೆಸಿ ಹಳಗನ್ನಡದ ಪರಿಚಯ ಮಾಡಿಸಿಕೊಡುತ್ತಿದೆ. ಹಸ್ತಪ್ರತಿಗಳ ಸಂಗ್ರಹಣ ಸಂರಕ್ಷಣೆ, ನಿಖರಪಠನ, ಸಂಪಾದನೆಗೆ ಸಾಹಿತ್ಯಾಸಕ್ತರಿಗೆ ತರಗತಿ, ಶಿಬಿರಗಳ ಮೂಲಕ ಮಾಹಿತಿ ನೀಡುತ್ತಿದೆ.

ಪ್ರೊ. ಎಂ. ವಿ. ಸೀತಾರಾಮಯ್ಯ ಅವರು ಸ್ವಗೃಹದಲ್ಲಿ ಸಂಗ್ರಹಿಸಿದ್ದ ಅಪಾರ ಸಂಖ್ಯೆಯ ಗ್ರಂಥಗಳನ್ನು ಪ್ರತಿಷ್ಠಾನದ ಹೊಸ ಕಟ್ಟಡಕ್ಕೆ ವರ್ಗಾಯಿಸಿದ ಮೇಲೆ ಸಾಹಿತ್ಯ ಪ್ರೇಮಿಗಳ ಕೊಡುಗೆಗಳಿಂದಾಗಿ ಬೃಹತ್ತಾಗಿ ಈಗ ಬೆಳೆದಿದೆ. ಮೂರು ಸಾವಿರಕ್ಕೂ ಹೆಚ್ಚು ಪ್ರಾಚೀನ, ಅರ್ವಾಚೀನ ಗ್ರಂಥಗಳ ಸಂಗ್ರಹವಿದೆ. ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ, ಸಂಕಲನಕಾರರಿಗೆ, ಅಲ್ಲದೆ ಎಲ್ಲಾ ಸಾಹಿತ್ಯಾಸಕ್ತರಿಗೂ ಬಹು ಉಪಯುಕ್ತವಾಗಿವೆ. ಇವನ್ನು ವೈಜ್ಞಾನಿಕವಾಗಿ ವರ್ಗೀಕರಿಸಿ ಸಜ್ಜುಗೊಳಿಸಿ, ಗ್ರಂಥಸೂಚಿ, ('ಅ'ಕಾರಾದಿ) ಸಾಹಿತ್ಯ ಪ್ರಕಾರಗಳ ಸೂಚಿ, ಲೇಖಕರ ಸೂಚಿ ಮುಂತಾದವನ್ನು ತಯಾರಿಸಿದರೆ ಹೆಚ್ಚು ಉಪಯುಕ್ತವಾಗುವುದರಲ್ಲಿ ಸಂದೇಹವಿಲ್ಲ. ಇವನ್ನು ಮಾಡಿ ನಮ್ಮ ಗ್ರಂಥಾಲಯಕ್ಕೆ ವೈಜ್ಞಾನಿಕ ಹೊಸ ಹುಟ್ಟು ನೀಡುವುದು ಅತಿ ಅವಶ್ಯವಾಗಿದೆ. ಕಂಪ್ಯೂಟರಿಗೆ ಅಳವಡಿಸುವುದೂ ಅನಿವಾರ್ಯ ಅಗತ್ಯವಾಗಿದೆ. ಈ ಬಗ್ಗೆ ನಮ್ಮ ಪ್ರತಿಷ್ಠಾನಕ್ಕೆ ನೆರವು ನೀಡಬಲ್ಲ ತಜ್ಞರು ಬೇಕಾಗಿದ್ದಾರೆ. ನಿವೃತ್ತ ಗ್ರಂಥಪಾಲರು, ಗ್ರಂಥಾಲಯ ವಿಜ್ಞಾನದ ತಜ್ಞರು ನಮ್ಮ ಪ್ರತಿಷ್ಠಾನವನ್ನು ಸಂಪರ್ಕಿಸಬೇಕಾಗಿ ಕೋರುತ್ತಿದ್ದೇವೆ.

■ *ಎಸ್.ವಿ. ಶ್ರೀನಿವಾಸರಾವ್*
ಸಂಪಾದಕರು

ಬೇಕಾಗಿದ್ದಾರೆ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಗ್ರಂಥಾಲಯದ ನಿರ್ವಹಣೆಗಾಗಿ ಒಬ್ಬ **ಗ್ರಂಥಪಾಲರು** ಬೇಕಾಗಿದ್ದಾರೆ. ಗ್ರಂಥಾಲಯದ ನಿರ್ವಹಣೆಯಲ್ಲಿ ಅನುಭವ ಇರುವವರು, ಅಧ್ಯಕ್ಷರು, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು–೧೯ ಅವರನ್ನು ಶೀಘ್ರವೇ ಸಂಪರ್ಕಿಸಬಹುದಾಗಿದೆ.

ಗ್ರಂಥಾಲಯದ ಕೆಲಸದ ವೇಳೆ : ಸಾಯಂಕಾಲ ೪ ರಿಂದ ೮–೩೦

ದೂರವಾಣಿ : ೨೬೬೧೫೪೮೭೭

ಪ್ರತಿಷ್ಠಾನದ ವಾರ್ತೆ

೩-೧-೨೦೧೧ 'ಶ್ರೀ ಉತ್ಸವ'-ಬಿ.ಎಂ.ಶ್ರೀ ಅವರ ೧೨೭ನೇ ಜನ್ಮದಿನದ ಕಾರ್ಯಕ್ರಮ-೧. ಕಣಕಟ್ಟೆ ಕೃಷ್ಣಮೂರ್ತಿರಾವ್ ಮತ್ತು ಬಿ.ಎಂ.ಶ್ರೀ. ದತ್ತಿ ಕಾರ್ಯಕ್ರಮಗಳು ನಡೆದವು. ಬಿ.ಎಂ.ಶ್ರೀ ಪ್ರತಿಮೆಗೆ ಮಾಲಾರ್ಪಣೆ : ಬೆಳಿಗ್ಗೆ ೧೦-೩೦ ಗಂಟೆಗೆ. ನ್ಯಾಷನಲ್ ಕಾಲೇಜ್ ವೃತ್ತದ ಬಳಿಯಿರುವ ಆಚಾರ್ಯ ಬಿ.ಎಂ.ಶ್ರೀ. ಅವರ ಪ್ರತಿಮೆಗೆ ಬಸವನಗುಡಿ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ ಎಲ್. ಎ. ರವಿಸುಬ್ರಹ್ಮಣ್ಯ ಅವರು ಮಾಲಾರ್ಪಣೆ ಮಾಡಿದರು. ಬಿ.ಬಿ.ಎಂ.ಪಿ.ಯ ಬಿ.ಜೆ.ಪಿ.



ಶ್ರೀ ಉತ್ಸವ ಬಿ.ಎಂ.ಶ್ರೀ ಅವರ ಫೋಟೋಗೆ ಮಾಲಾರ್ಪಣೆ

ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ. ಎಸ್. ಸತ್ಯನಾರಾಯಣ, ಬಿ.ಬಿ.ಎಂ.ಪಿ. ಸದಸ್ಯ ಎಸ್. ಅನಿಲ್‌ಕುಮಾರ್, ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಡಿ. ಲಿಂಗಯ್ಯ, ಕಾರ್ಯದರ್ಶಿ ಡಾ. ನಾ. ಗೀತಾಚಾರ್ಯ ಮುಂತಾದವರು ಉಪಸ್ಥಿತರಿದ್ದರು. ಶ್ರೀ ಎಸ್. ವಿ. ಶ್ರೀನಿವಾಸರಾವ್ ಅವರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀಮತಿ ರಮಾದೇವಿ ವಿಶ್ವೇಶ್ವರಯ್ಯ ಅವರು ಬಿ.ಎಂ.ಶ್ರೀ. ಅವರ ಗೀತಗಾಯನ ಮಾಡಿದರು. ಡಾ. ಗೀತಾಚಾರ್ಯ ಎಲ್ಲರನ್ನೂ ವಂದಿಸಿದರು. ಮುಂದುವರಿದ ಕಾರ್ಯಕ್ರಮದ ಅಂಗವಾಗಿ ನಂತರ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಲ್ಲಿರುವ ಬಿ.ಎಂ.ಶ್ರೀ ಪ್ರತಿಮೆಗೆ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಮಾಲಾರ್ಪಣೆ ಮಾಡಿದರು. ಬಿ.ಎಂ.ಶ್ರೀ. ಗೀತಗಾಯನ ಸ್ಪರ್ಧೆಯಲ್ಲಿ ಹಲವು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದನ್ನು ಖ್ಯಾತ ಪತ್ರಕರ್ತ ಶ್ರೀ ಟಿ. ನಾಗರಾಜು ಉದ್ಘಾಟಿಸಿದರು. ಈ ಕಾರ್ಯಕ್ರಮಗಳ ಅಧ್ಯಕ್ಷತೆಯನ್ನು ಪ್ರೊ. ಡಿ. ಲಿಂಗಯ್ಯ ವಹಿಸಿದ್ದರು.

ಕಾರ್ಯಕ್ರಮ ೨ : ಸಂಜೆ ೫-೦೦ ಗಂಟೆಗೆ **'ಬಿ.ಎಂ.ಶ್ರೀ. ಆಯ್ದ ಕವನಗಳು'** ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಿತು. **ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಕಾರ್ಯದರ್ಶಿ ಶ್ರೀ ರಮೇಶ ಝುಳಕಿಯವರು** ಪುಸ್ತಕ ಲೋಕಾರ್ಪಣಗೊಳಿಸಿದರು. ಪ್ರೊ. ಎನ್. ಬಸವಾರಾಧ್ಯ ಅವರು



ಶ್ರೀ ಉತ್ಸವ ಬಿ.ಎಂ.ಶ್ರೀ ಆಯ್ದ ಕವನಗಳ ಲೋಕಾರ್ಪಣೆ
ಗೀತಗಾಯನ ಕಾರ್ಯಕ್ರಮ

ಗೀತಗಾಯನ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಿದರು. ಬಿ.ಎಂ.ಶ್ರೀ. ಗೀತೆಗಳ ಗಾಯನ ಕಾರ್ಯಕ್ರಮವನ್ನು ಖ್ಯಾತ ಗಾಯಕರಾದ ಶ್ರೀ ನಾರಾಯಣರಾವ್ ಮಾನೆ ನಡೆಸಿಕೊಟ್ಟರು. ಅಜಂತ ಸಾಂಸ್ಕೃತಿಕ ವಿದ್ಯಾಸಂಸ್ಥೆಯವರಿಂದ ಬಿ.ಎಂ.ಶ್ರೀ ಅವರಿಗೆ ಸಂಬಂಧಿಸಿದಂತೆ 'ಸಿರಿಸಂಗೀತ' ಕಾರ್ಯಕ್ರಮ ಹಾಗೂ ಸಮೂಹ ನೃತ್ಯ ನಡೆಯಿತು. ಈ ಸಂಸ್ಥೆಯ ನಿರ್ದೇಶಕಿ ಶ್ರೀಮತಿ ಲಕ್ಷ್ಮೀ ಎನ್. ಮೂರ್ತಿ ಅವರು ಕಾರ್ಯಕ್ರಮ ನಿರ್ದೇಶಿಸಿದರು. ನಾಡೋಜ ಡಾ. ಜಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು ಶ್ರೀ ಎಸ್. ವಿ. ಶ್ರೀನಿವಾಸರಾವ್ ಪ್ರಾರಂಭದಲ್ಲಿ ಸರ್ವರನ್ನು ಸ್ವಾಗತಿಸಿ ಮುಖ್ಯ ಅತಿಥಿಗಳ ಪರಿಚಯ ಮಾಡಿಸಿದರು. ಕೊನೆಯಲ್ಲಿ ಡಾ. ಗೀತಾಚಾರ್ಯ ವಂದಿಸಿದರು.



ಅಜಂತಾ ಸಾಂಸ್ಕೃತಿಕ ಸಂಸ್ಥೆಯವತಿಯಿಂದ ಸಮೂಹನೃತ್ಯ ಪ್ರದರ್ಶನ

೧೭-೧-೨೦೧೧ ಪಿ. ಕಾಳಿಂಗರಾವ್ ಬಳಗ ದತ್ತಿ ಮತ್ತು ಎಂವಿ.ಸೀ. ಕನ್ನಡ ದತ್ತಿ ಕಾರ್ಯಕ್ರಮಗಳಡಿ, ಎಂ.ವಿ.ಸೀ. ಸ್ಮಾರಕ ನಾಡು-ನುಡಿ ಗೀತೆಗಳ ಸ್ಪರ್ಧೆ ಕಾರ್ಯಕ್ರಮ ನಡೆಯಿತು. ಪ್ರೊ. ಡಿ. ಲಿಂಗಯ್ಯ ಅವರು ಉದ್ಘಾಟನೆ ಮಾಡಿದರು. ಬಿ.ಎಂ.ಶ್ರೀ ಸ್ಮಾರಕ ಭಾವಗೀತೆ ಸ್ಪರ್ಧೆ ಮತ್ತು ಪಿ. ಕಾಳಿಂಗರಾವ್ ಸ್ಮಾರಕ ಜನಪದಗೀತೆ ಸ್ಪರ್ಧೆಯಲ್ಲಿ ವಿಜೇತರಿಗೆ

ಡಾ॥ ವಿಜಯ ಸುಬ್ಬರಾಜ್ ಬಹುಮಾನ ವಿತರಿಸಿದರು. ನಾಡೋಜ ಜಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ರಮಾದೇವಿ ವಿಶ್ವೇಶ್ವರಯ್ಯರವರಿಂದ ನಾಡಗೀತೆ ಹಾಗೂ ಪ್ರಾರ್ಥನೆ ನಡೆಯಿತು. ಡಾ. ಗೀತಾಚಾರ್ಯ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ಎಸ್. ವಿ. ಶ್ರೀನಿವಾಸರಾವ್ ಅವರಿಂದ ವಂದನಾರ್ಪಣೆ ನಡೆಯಿತು.

೧೦-೨-೨೦೧೧ : ಮುಂಜಾನೆ ೯-೩೦ಕ್ಕೆ ಧಾರವಾಡದ ಜಿ.ಎಸ್.ಎಸ್. ಮಹಾವಿದ್ಯಾಲಯ ವಿದ್ಯಾಗಿರಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ; ಆಕಾಶವಾಣಿ ಧಾರವಾಡ ; ಅಜಂತಾ ಸಾಂಸ್ಕೃತಿಕ ವಿದ್ಯಾಸಂಸ್ಥೆ ಬೆಂಗಳೂರು ಇವುಗಳ ಸಂಯುಕ್ತ ಆಶ್ರಯದಲ್ಲಿ **'ಕನ್ನಡಕಣ್ವ ಬಿ.ಎಂ.ಶ್ರೀ-ವಿಚಾರ ಸಂಕಿರಣ'** ಕಾರ್ಯಕ್ರಮಗಳು ನಡೆದವು.

ಎಸ್.ಡಿ.ಎಂ.ಇ. ಸೊಸಾಯಿಟಿ ಧಾರವಾಡದ ಉಪಾಧ್ಯಕ್ಷರಾದ ಪ್ರೊ. ನ. ವಜ್ರಕುಮಾರ್ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಡಾ. ಗಿರಡ್ಡಿ ಗೋವಿಂದರಾಜ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಜಿ.ಎಸ್.ಎಸ್. ಕಾಲೇಜಿನ ಪ್ರಾಚಾರ್ಯರಾದ ಡಾ. ಅಜಿತಪ್ರಸಾದ್ ಅವರು ಪ್ರಾಸ್ತಾವಿಕ ಭಾಷಣ ಮಾಡಿ ಬಿ.ಎಂ.ಶ್ರೀ ಅವರನ್ನು ಸ್ಮರಿಸಿದರು. ಸ್ತುತಿಸಿದರು. ಪ್ರೊ. ಡಿ. ಲಿಂಗಯ್ಯ ಅವರು **'ಬಿ.ಎಂ.ಶ್ರೀ ಅವರ ಜೀವನ-ಸಾಧನೆ'** ಕುರಿತು ಮಾತನಾಡಿದರು. 'ಬಿ.ಎಂ.ಶ್ರೀಕಂಠಯ್ಯ ಜೀವನ ಸಾಧನೆ' (ಸಂಪಾದನೆ ಪ್ರೊ. ಕೆ. ಎಸ್. ದೇಶಪಾಂಡೆ) ಗ್ರಂಥವನ್ನು ಆಕಾಶವಾಣಿ ಕೇಂದ್ರದ ಶ್ರೀ ಸಿ. ಯು. ಬೆಳ್ಳಕ್ಕಿ ಅವರು ಬಿಡುಗಡೆ ಮಾಡಿದರು. ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಬಿ. ಎಂ. ಶ್ರೀಕಂಠಯ್ಯ ಅವರ ಸಾಧನೆಗಳ ಮೇಲೆ ವಿದ್ವತ್‌ಪೂರ್ಣ ಭಾಷಣ ಮಾಡಿದರು.

ಈ ಉದ್ಘಾಟನಾ ಕಾರ್ಯಕ್ರಮದ ಅನಂತರ ಗೋಷ್ಠಿಗಳು ನಡೆದವು. **ಮೊದಲ ಗೋಷ್ಠಿ** : ೧೧-೩೦ ರಿಂದ ನಡೆಯಿತು.

ಡಾ. ನಾ. ಗೀತಾಚಾರ್ಯ, ಗೌರವ ಕಾರ್ಯದರ್ಶಿ ಬಿ.ಎಂ.ಶ್ರೀ. ಪ್ರತಿಷ್ಠಾನ, ಅವರು **ನಾಡು-ನುಡಿ, ಕೊಡುಗೆ, ಬಿ.ಎಂ.ಶ್ರೀ. ಪರಂಪರೆ** ಬಗ್ಗೆ ಮಾತನಾಡಿದರು. 'ಮಹಿಳಾ ಪ್ರಗತಿಪರ ಚಿಂತನೆ' ವಿಷಯದ ಬಗ್ಗೆ ಬಿ.ಎಂ.ಶ್ರೀ. ಅವರ ಮೊಮ್ಮಕ್ಕಳಾದ **ಶೀಮತಿ ಲಕ್ಷ್ಮೀ ಎಸ್. ಮೂರ್ತಿ** ಮತ್ತು ಖ್ಯಾತ ವೈದ್ಯೆ **ಡಾ. ಸೌಭಾಗ್ಯ ಕುಲಕರ್ಣಿ**ಯವರ ಮಾತನಾಡಿ ಹಿರಿಯರನ್ನು ನೆನಸಿಕೊಂಡರು. ಆತ್ಮೀಯವಾಗಿ ಹಲವ ವಿಷಯ ಹಂಚಿಕೊಂಡರು. ಹಿರಿಯ ಸಾಹಿತಿ **ಶ್ರೀ ಎಸ್. ವಿ. ಶ್ರೀನಿವಾಸರಾವ್** ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷ ಭಾಷಣದಲ್ಲಿ ಬಿ.ಎಂ.ಶ್ರೀ ಪ್ರತಿಷ್ಠಾನದ ಚಟುವಟಿಕೆಗಳ ಪರಿಚಯ ಮಾಡಿಕೊಟ್ಟರು.



ಎಂ.ವಿ.ಸೀ. ಕನ್ನಡ ದತ್ತಿ ಕಾರ್ಯಕ್ರಮ ಎಂ.ವಿ.ಸೀ. ಸ್ಮಾರಕ ನಾಡು-ನುಡಿ ಗೀತೆಗಳ ಸ್ಪರ್ಧೆ

೨ನೇ ಗೋಷ್ಠಿ : ೨.೦೦ ಗಂಟೆಯಿಂದ

ಬಿ.ಎಂ.ಶ್ರೀ ಸಾಹಿತ್ಯ ಅವಲೋಕನ.

'ವಿಮರ್ಶೆ' ಕುರಿತು **ಡಾ. ಎಂ.ಜಿ. ಹೆಗಡೆ** (ಪ್ರಾಧ್ಯಾಪಕರು ಡಾ. ಎ. ವ್ಹಿ. ಬಾಳಿಗಾ ಕಾಲೇಜು ಕುಮಟಾ), **'ನಾಟಕ'** ಕುರಿತು **ಡಾ. ಬಾಳಾಸಾಹೇಬ-ಲೋಕಾಪುರ** (ಪ್ರಾಧ್ಯಾಪಕರು, ಸಕ್ರಿ ಕಾಲೇಜು, ಬಾಗಲಕೋಟೆ) ; **'ಇಂಗ್ಲೀಷ್ ಗೀತೆಗಳ'** ಬಗ್ಗೆ **ಡಾ. ವಾಯ್. ಎಂ. ಭಜಂತ್ರಿ** (ಪ್ರಾಧ್ಯಾಪಕರು, ಸರಕಾರಿ ಪ್ರದ. ಕಾಲೇಜು, ಸವದತ್ತಿ); **'ಸಾಹಿತ್ಯ ಚರಿತ್ರೆ'** ಕುರಿತು **ಡಾ. ಎಫ್. ಟಿ. ಹಳ್ಳಿಕೇರಿ** (ಪ್ರಾಧ್ಯಾಪಕರು, ಕನ್ನಡ ಹಂಪಿ, ವಿ.ವಿ); **'ಹೊಂಗನಸುಗಳು'** ಕುರಿತು **ಡಾ. ಪಿ. ಜಿ. ಕೆಂಪಣ್ಣವರ** (ಉಪನ್ಯಾಸಕರು, ರಾಯಭಾಗ) ಇವರುಗಳು ಮೌಲಿಕ ಉಪನ್ಯಾಸಗಳನ್ನು ನೀಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಖ್ಯಾತ ವಿಮರ್ಶಕ **ಡಾ. ಗಿರಡ್ಡಿ ಗೋವಿಂದರಾಜ್** ವಹಿಸಿದ್ದರು. ಬಿ.ಎಂ.ಶ್ರೀ.ಅವರ ತಂಗಿ ಮಗ



ಕನ್ನಡ ಕಣ್ವ ಬಿ.ಎಂ.ಶ್ರೀ ವಿಚಾರ ಸಂಕಿರಣ-೧ರಲ್ಲಿ ಗಣ್ಯರು



ಕನ್ನಡ ಕಣ್ವ ಬಿ.ಎಂ.ಶ್ರೀ ವಿಚಾರ ಸಂಕಿರಣ-೨ರಲ್ಲಿ ಗಣ್ಯರು



ಕನ್ನಡ ಕಣ್ವ ಬಿ.ಎಂ.ಶ್ರೀ ವಿಚಾರ ಸಂಕಿರಣದಲ್ಲಿ ಗಣ್ಯರು

ಎನ್. ಎಸ್. ಕೃಷ್ಣಸ್ವಾಮಿ, ಡೆಕ್ಕನ್ ಹೆರಾಲ್ಡ್‌ನ ನಿವೃತ್ತ ಖ್ಯಾತ ತ್ರಿಕಾಕರ್ತರು, ಅವರನ್ನು ಸನ್ಮಾನಿಸಲಾಯಿತು.

೧೧-೨-೨೦೧೧ ಮುಂಜಾನೆ ೧೧-೦೦ ಗಂಟೆಗೆ : ಕರ್ನಾಟಕ ಶ್ವವಿದ್ಯಾಲಯ, ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನಪೀಠ, ರ್ನಾಟಕ ಸಂಘ ಹಾಗೂ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನಗಳು ಂಯುಕ್ತವಾಗಿ ಆಯೋಜಿಸಿದ್ದ **ಎಂ.ವಿ.ಸೀತಾರಾಮಯ್ಯ ತಮಾನೋತ್ಸವ ಕಾರ್ಯಕ್ರಮದ** ಅಂಗವಾಗಿ 'ವಿಚಾರಗೋಷ್ಠಿ' ನಡೆದವು.

ಪ್ರೊ. ಡಿ. ಲಿಂಗಯ್ಯ ವಿಚಾರಗೋಷ್ಠಿಯ ಉದ್ಘಾಟನೆ ನಡೆಸಿದರು.



ಜೆ.ಎಸ್.ಎಸ್. ಮಹಾವಿದ್ಯಾಲಯದಲ್ಲಿ ಬಿ.ಎಂ.ಶ್ರೀ ವಿಚಾರ ಸಂಕಿರಣ

'ಎಂ.ವಿ.ಸೀ. ಅವರ ಜೀವನ ಮತ್ತು ಸಾಹಿತ್ಯ' ಕುರಿತು ಶ್ರೀ ಎಸ್. ವಿ. ಶ್ರೀನಿವಾಸರಾವ್ ಭಾಷಣ ಮಾಡಿದರು. **'ಎಂ.ವಿ.ಸೀ. ಮತ್ತು ಪ್ರಾಚೀನ ಕನ್ನಡ ಹಸ್ತಪ್ರತಿ'** ಕುರಿತು ಡಾ|| ನಾ. ಗೀತಾಚಾರ್ಯ, **'ಹಸ್ತಪ್ರತಿಗಳ ಕಂಪ್ಯೂಟರಿಕರಣ'** ಯೋಜನೆ ಕರಿತು ಡಾ. ಮಧು ವೆಂಕಾರೆಡ್ಡಿ, (ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ) ಮಾತನಾಡಿ ಮೌಲಿಕ ವಿವರಗಳನ್ನು ತಿಳಿಸಿದರು. ಕನ್ನಡ ಅಧ್ಯಯನ ಪೀಠದ ಅಧ್ಯಕ್ಷರಾದ ಡಾ. ಕೆ. ಆರ್. ದುರ್ಗದಾಸ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಲಕ್ಷ್ಮೀಕಾಂತ ಎಸ್. ಹೂಗಾರ್, ಶ್ರೀ ದೇವಿನಾಪ್ಪಿ ; ಡಾ. ಜೆ. ಎಂ. ನಾಗಯ್ಯ ಉಪಸ್ಥಿತರಿದ್ದರು.

೨೧-೨-೨೦೧೧ ಸೋಮವಾರ ೫-೩೦ ಗಂಟೆಗೆ : ಬೇಟೆರಾಯ ದೀಕ್ಷಿತ, ಪ್ರೊ. ಬಿ. ರಾಮಸ್ವಾಮಿ ಮತ್ತು ಎಸ್. ಶ್ರೀಕಂಠಯ್ಯ ದತ್ತಿ



ಪ್ರೊ. ಬಿ.ರಾಮಸ್ವಾಮಿ ಶತಮಾನೋತ್ಸವ ಮತ್ತು ಎಚ್.ವಿ.ಸಾವಿತ್ರಮ್ಮ ರಾಮಸ್ವಾಮಿ ಅವರು ರಚಿಸಿರುವ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮ

ಕಾರ್ಯಕ್ರಮಗಳ ಜೊತೆಗೆ ಪ್ರೊ. ಬಿ. ರಾಮಸ್ವಾಮಿ ಶತಮಾನೋತ್ಸವ ಮತ್ತು ಪುಸ್ತಕ ಬಿಡುಗಡೆ ಸಮಾರಂಭ ಏರ್ಪಡಿಸಲಾಗಿತ್ತು. ಖ್ಯಾತ ವಿದ್ವಾಂಸ ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಸಮಾರಂಭ ಉದ್ಘಾಟಿಸಿದರು. ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರು **'ಬರಡು-ಬರಹಗಳು'** ; **'ಕಾವ್ಯದ ಒಂದು ಚುಂಗನ್ನು ಹಿಡಿದು'** ; **'ಸುದ್ದಿ ಸಂಕಮ್ಮ'** ಪುಸ್ತಕಗಳನ್ನು ಬಿಡುಗಡೆಮಾಡಿ ಪ್ರೊ. ಬಿ. ರಾಮಸ್ವಾಮಿ ಅವರ ಮತ್ತು ಅವರ ಪತ್ನಿಯವರ ವಿದ್ವತ್ ಪ್ರತಿಭೆಯನ್ನು ವರ್ಣಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಟಿ. ಆರ್. ಬೇಟೆರಾಯ; ಡಾ. ವಿಜಯಾ ಸುಬ್ಬರಾಜ್ ; ಸಾವಿತ್ರಮ್ಮ ರಾಮಸ್ವಾಮಿ, ಎಸ್. ರಾಮಚಂದ್ರ ಉಪಸ್ಥಿತರಿದ್ದು ಅವರುಗಳು ತಮ್ಮ ಹಿರೀಕರನ್ನು ನೆನಪಿಸಿಕೊಂಡು, ಗುಣಗಾನ ಮಾಡಿದರು. ನಾಡೋಜ ಜಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಡಾ. ನಾ. ಗೀತಾಚಾರ್ಯ ದತ್ತಿ ಕಾರ್ಯಕ್ರಮಗಳ ಬಗ್ಗೆ ವಿವರ ನೀಡಿ ರಾಮಸ್ವಾಮಿ ಕುಟುಂಬದವರ ಕೊಡುಗೆಗಳನ್ನು ಸ್ಮರಿಸಿ, ಶ್ರೀಮತಿ ಸಾವಿತ್ರಮ್ಮ ಅವರ ಸಾಹಿತ್ಯಾಸಕ್ತಿಯನ್ನು ಪ್ರಶಂಸಿದರು. ಕೊನೆಯಲ್ಲಿ ಎಸ್. ವಿ. ಶ್ರೀನಿವಾಸರಾವ್ ಎಲ್ಲರನ್ನೂ ವಂದಿಸಿದರು. ದತ್ತಿದಾನಿಗಳ ಪರವಾಗಿ ಶ್ರೀ ಎಸ್. ರಾಮಚಂದ್ರ, ಆರ್. ಜಯರಾಮ್ ಮಾತನಾಡಿದರು.

೨೬-೨-೨೦೧೧ : ಮೈಸೂರು ವಿಶ್ವವಿದ್ಯಾಲಯದ ಕನ್ನಡ ಜಾನಪದ ವಿಭಾಗ, ಮಹಾರಾಜ ಕಾಲೇಜು, ಮೈಸೂರು, ಹಾಗೂ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನಗಳ ಸಂಯುಕ್ತ ಆಶ್ರಯದಲ್ಲಿ **'ಬಿ.ಎಂ.ಶ್ರೀ. ಒಂದು ನೆನಪು'**-ಒಂದು ದಿನದ ರಾಜಮಟ್ಟದ **'ವಿಚಾರ ಸಂಕಿರಣ'** ಕಾರ್ಯುಕ್ರಮವನ್ನು ಮೈಸೂರಿನ ಕಾಲೇಜು ಆವರಣದಲ್ಲಿ ಏರ್ಪಡಿಸಲಾಗಿತ್ತು.

ಉದ್ಘಾಟನಾ ಸಮಾರಂಭ : ಈ ಕಾರ್ಯಕ್ರಮದ ಉದ್ಘಾಟನೆಯನ್ನು ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಡಿ. ಲಿಂಗಯ್ಯ ನೆರವೇರಿಸಿದರು. ಮೈಸೂರು ಮಹಾರಾಜ ಕಾಲೇಜಿನ ಪ್ರಿನ್ಸಿಪಾಲ್ ಶ್ರೀಮತಿ ಸ.ನ. ಗಾಯತ್ರಿ ಅವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ. ಸಿ.ಪಿ.ಕೆ. ಆಗಮಿಸಿದ್ದರು. ಡಾ. ಕೆ. ತಿಮ್ಮಯ್ಯ (ಮುಖ್ಯಸ್ಥರು, ಕನ್ನಡ ಮತ್ತು ಜನಪದ ವಿಭಾಗ. ಮಹಾರಾಜ ಕಾಲೇಜು) ಉಪಸ್ಥಿತರಿದ್ದರು.

ಉದ್ಘಾಟನಾ ಸಮಾರಂಭದ ನಂತರ ೨ ಗೋಷ್ಠಿಗಳು ನಡೆದವು. ಮೊದಲನೇ ಗೋಷ್ಠಿಯಲ್ಲಿ ಖ್ಯಾತ ಸಾಹಿತಿಗಳಾದ ಡಾ. ಸಿ. ಪಿ. ಕೃಷ್ಣಕುಮಾರ್ ಅವರು **'ಬಿ.ಎಂ.ಶ್ರೀ.ಯರ ಬದುಕು** ಕುರಿತು, ಪ್ರೊ. ನಾ. ಗೀತಾಚಾರ್ **'ನಾಡು-ನುಡಿ ಕುರಿತ ಚಿಂತನೆ'** ವಿಚಾರಪೂರ್ಣ ಭಾಷಣ ಮಾಡಿದರು.

೨ನೇ ಗೋಷ್ಠಿಯಲ್ಲಿ 'ಅನುವಾದ-ರೂಪಾಂತರ' ಬಗ್ಗೆ ವಿಷಯ ಕುರಿತು ಡಾ. ಮ. ರಾಮಕೃಷ್ಣ (ಪ್ರಾಧ್ಯಾಪಕರು, ಭಾರತಿ ಕಾಲೇಜು, ಭಾರತೀನಗರ) **ವಿಮರ್ಶೆ/ ಶಾಸ್ತ್ರಗ್ರಂಥಗಳು** ಕುರಿತು ಪ್ರೊ. ಜಿ. ಆರ್.ತಿಪ್ಪೇಸ್ವಾಮಿ (ಪ್ರಾಧ್ಯಾಪಕರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು) ಮೌಲಿಕ ವಿಚಾರಗಳನ್ನು ಮಂಡಿಸಿದರು.

ಬೆಂಗಳೂರಿನಿಂದ ಬಿ.ಎಂ.ಶ್ರೀ ಬಗ್ಗೆ ನೃತ್ಯರೂಪಕಗಳನ್ನು ಪ್ರದರ್ಶಿಸಲು ಬಿ.ಎಂ.ಶ್ರೀ. ಅವರ ಮೊಮ್ಮಗಳ ನೇತೃತ್ವದಲ್ಲಿ ಅಜಂತಾ ಸಾಂಸ್ಕೃತಿಕ ವಿದ್ಯಾಸಂಸ್ಥೆಯ ಕೆಲ ಸದಸ್ಯರು ಆಗಮಿಸಿದ್ದು ಬಹು ಆಕರ್ಷಣೀಯ ನೃತ್ಯಗಳನ್ನು ಪ್ರದರ್ಶಿಸಿ ಸಭಿಕರನ್ನು ರಂಜಿಸಿದರು.

೨೫-೩-೨೦೧೧ ಸಂಜೆ ೬-೦೦ ಗಂಟೆಗೆ ಎಂ.ವಿ.ಸೀ. ಶತಮಾನೋತ್ಸವದ ಅಂಗವಾಗಿ ಎಂ.ವಿ.ಸೀ. ಸಭಾಂಗಣದಲ್ಲಿ ಎಂ.ವಿ.ಸೀ. ಪುರಸ್ಕಾರ ಮತ್ತು ಎಂ.ಫಿಲ್, ಪಿಎಚ್.ಡಿ. ಪದವಿ ಪ್ರದಾನ ಸಮಾರಂಭ ಏರ್ಪಡಿಸಲಾಗಿತ್ತು. ನಾಡೋಜ ಡಾ. ಜಿ. ನಾರಾಯಣ ದೀಪ ಬೆಳಗುವ ಮುಖೇನ ಸಮಾರಂಭ ಉದ್ಘಾಟಿಸಿ ಚಾಲನೆ ನೀಡಿದರು. ಕಾರ್ಯದರ್ಶಿಗಳಾದ ಶ್ರೀ ಎಸ್. ವಿ. ಶ್ರೀನಿವಾಸರಾವ್ ಅವರು ಮುಖ್ಯ ಅತಿಥಿಗಳ ಪರಿಚಯ ಮಾಡಿಸಿ, ಎಲ್ಲರನ್ನೂ ಸ್ವಾಗತಿಸಿದರು. ಗಮಕ ವಿದ್ವಾನ್ ಡಾ. ಎ. ವಿ. ಪ್ರಸನ್ನ ಅವರು ಎಂ.ಫಿಲ್ ಮತ್ತು ಪಿಎಚ್.ಡಿ. ಪದವೀಧರರಿಗೆ ಪ್ರಶಸ್ತಿಪತ್ರ ಪ್ರದಾನಮಾಡಿ ಅವರಿಗೆ ಶುಭ ಹಾರೈಸಿದರು. ಖ್ಯಾತ ಸಾಹಿತಿ ಹಾಗೂ ಹಿರಿಯ ಚಿಂತಕರಾದ **ಬೆಳಗೆರೆ ಕೃಷ್ಣಶಾಸ್ತ್ರಿಗಳಿಗೆ** ಶಾಲು ಹೊದಿಸಿ ಎಂ.ವಿ.ಸೀ. ಪುರಸ್ಕಾರ ಫಲಕ ಪ್ರದಾನ ಮತ್ತು ನಗದು ಹತ್ತು ಸಾವಿರ ರೂಪಾಯಿಗಳನ್ನು ನಾಡೋಜ ಜಿ. ನಾರಾಯಣ ಪ್ರದಾನ ಮಾಡಿ ಶ್ರೀ ಬೆಳಗೆರೆ ಕೃಷ್ಣಶಾಸ್ತ್ರಿಗಳು ಪ್ರತಿಷ್ಠಾನದ ಪ್ರಾರಂಭದಿಂದಲೂ ನಿಕಟ ಸಂಪರ್ಕ ಇರಿಸಿಕೊಂಡಿದ್ದು **ಪ್ರತಿಷ್ಠಾನದ ಚಟುವಟಿಕೆಗೆ ನಿರಂತರ ದುಡಿದಿದ್ದಾರೆಂದು** ಶ್ಲಾಘಿಸಿದರು. ಎಲ್ಲ ಹಿರಿಯ ಸಾಹಿತಿಗಳೊಡನೆ ನಿಕಟ ಸಂಪರ್ಕ ಹೊಂದಿದ್ದಾರೆಂದು ತಿಳಿಸಿದರು.



ಎಂ.ವಿ.ಸೀ. ಪುರಸ್ಕಾರ ಪ್ರಧಾನ ಸಮಾರಂಭದಲ್ಲಿ ಪುರಸ್ಕೃತ ಶ್ರೀ ಬೆಳಗೆರೆ ಕೃಷ್ಣಶಾಸ್ತ್ರಿ, ಎ.ವಿ. ಪ್ರಸನ್ನ, ಡಾ. ಜಿ. ನಾರಾಯಣ, ಡಾ. ವಿಜಯ ಸುಬ್ಬರಾವ್, ಎಸ್.ವಿ. ಶ್ರೀನಿವಾಸರಾವ್, ಡಾ. ಗೀತಾಚಾರ್ಯರು

ಕಾರ್ಯಕ್ರಮದ ಪ್ರಾರಂಭದಲ್ಲಿ ಶ್ರೀಮತಿ ರಮಾದೇವಿ ವಿಶ್ವೇಶ್ವರಯ ನಾಡಗೀತೆ ಹಾಡಿ, ಉದ್ಘಾಟನೆ ಸಮಯದಲ್ಲಿ 'ಹಚ್ಚೇವು ಕನ್ನಡದೀಪ' ಹಾಡಿದರು. ಎಂ.ವಿ.ಸೀ. ಕೇಂದ್ರದ ಸಂಯೋಜನಾಧಿಕಾರಿಗಳಾದ ಡಾ. ವಿಜಯ ಸುಬ್ಬರಾಜ್ ಎಂಫಿಲ್, ಪಿ.ಎಚ್‌ಡಿ. ಪದವಿಗಳಿಗೆ ಸೂ ಮಾರ್ಗದರ್ಶನ ನೀಡಿದ ವಿದ್ವಾಂಸರ ಕೊಡುಗೆಯನ್ನು ಪ್ರಶಂಸಿದರು. ಪದವಿ ಸ್ವೀಕರಿಸಿದ ವಿದ್ಯಾರ್ಥಿಗಳ ಪರವಾಗಿ ಎನ್. ಮಂಜುನಾಥ್ ಅನ್ನಪೂರ್ಣ, ಬಸವರಾಜಪ್ಪ ಅವರುಗಳು ಮಾತನಾಡಿ ಮಾರ್ಗದರ್ಶಕ ನೆರವನ್ನು ಕೊಂಡಾಡಿ ಪ್ರತಿಷ್ಠಾನಕ್ಕೆ ಕೃತಜ್ಞತೆ ಸಲ್ಲಿಸಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಡಿ. ಲಿಂಗಯ್ಯ ಅಧ್ಯಕ್ಷ ಭಾಷಣ ಮಾಡಿ ಪದ ಪುರಸ್ಕೃತರಿಗೆ ಅಭಿನಂದನೆ ಸಲ್ಲಿಸಿ ಅವರ ಭವಿಷ್ಯ ಉಜ್ವಲವಾಗಲೆಂದು ಶುಭಾಶಯ ಕೋರಿದರು. ಕಾರ್ಯಕ್ರಮವನ್ನು ಪ್ರಾರಂಭದಿಂದ ಕೊನೆಯವರೆಗೆ ಡಾ. ನಾ. ಗೀತಾಚಾರ್ಯ ನಿರೂಪಿಸಿದರು. ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದಿಂದ ಪ್ರತಿಷ್ಠಾನದ ಮೂಲಕ ಈ ಕೆಳಕಂಡವರು ಎಂ.ಫಿಲ್., ಪಿಎಚ್.ಡಿ. ಪದವಿಗಳನ್ನು ಸ್ವೀಕರಿಸಿದರು :



೨೬-೩-೨೦೧೧ರಂದು ಉಜಿರೆಯಲ್ಲಿ ನಡೆದ ಪ್ರಥಮ ರಾಷ್ಟ್ರೀಯ ಹಸ್ತಪ್ರತಿ ಸಮಾವೇಶದಲ್ಲಿ ಪ್ರೊ. ಬಸವಾರಾಧ್ಯ ಅವರಿಗೆ ಸನ್ಮಾನ



೨೬-೩-೨೦೧೧ರಂದು ಉಜಿರೆಯಲ್ಲಿ ನಡೆದ ಪ್ರಥಮ ರಾಷ್ಟ್ರೀಯ ಹಸ್ತಪ್ರತಿ ಸಮಾವೇಶ ಉದ್ಘಾಟನಾ ಕಾರ್ಯಕ್ರಮ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

ಎಂ.ಫಿಲ್ ೨೦೦೯-೧೦ನೇ ಸಾಲಿನ ಪದವಿ ಪಡೆದಿರುವವರು

ಕ್ರಸಂ	ಹೆಸರು	ಅಂಕಗಳು ೫೦೦ಕ್ಕೆ	ದರ್ಜೆ	ನಿಬಂಧದ ವಿಷಯ	ಮಾರ್ಗದರ್ಶಕರು
೧.	ಲೀಲಾವತಿ ಪಿ.	೩೪೧	ಪ್ರಥಮ ೭೧%	ಎಸ್. ಶಿವಣ್ಣನವರ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಒಂದು ಅಧ್ಯಯನ	ಡಾ॥ ನಾ. ಗೀತಾಚಾರ್ಯ
೨.	ರಾಘವೇಂದ್ರಚಾರ್ ಕೆ.	೩೪೧	ಪ್ರಥಮ ೭೦%	'ಎಂ.ವಿ.ಸೀ.ಯವರ ಸಣ್ಣ ಕಥೆಗಳು' ಒಂದು ಅಧ್ಯಯನ'	ಡಾ॥ ಪಿ.ವಿ. ನಾರಾಯಣ
೩.	ಅನ್ನಪೂರ್ಣ ಮಲ್ಲಪ್ಪ ಕಂಬಾರ	೩೩೯	ಪ್ರಥಮ ೭೩	'ಗಾಂಧಿ' ಮೂಲ ಕಥೆ ಮತ್ತು 'ನಾನು ಗಾಂಧಿ ಸಿನಿಮಾ' ತೌಲನಿಕ ಅಧ್ಯಯನ	ಡಾ॥ ನಾ. ಗೀತಾಚಾರ್ಯ
೪.	ಸುನಿಲ್‌ಕುಮಾರ್ ಹೆಚ್	೩೩೮	ಪ್ರಥಮ ೬೪%	ಡಾ॥ ಬೆಸಗರಹಳ್ಳಿರಾಮಣ್ಣನವರ ಕಥೆಗಳಲ್ಲಿನ ಶೋಷಣೆಯ ನೆಲೆಗಳು	ಡಾ॥ ಅರ್. ಲಕ್ಷ್ಮಿನಾರಾಯಣ
೫.	ರಾಮಸ್ವಾಮಿ ಹೆಚ್. ಡಿ.	೩೧೭	ಪ್ರಥಮ ೬೪%	ಕುವೆಂಪು ಕಾದಂಬರಿಗಳಲ್ಲಿ ರೈತ ಚಿತ್ರಗಳು	ಪ್ರೊ॥ ಡಿ. ಲಿಂಗಯ್ಯ
೬.	ನಂದಿನಿ ಎನ್.	೩೦೯	ಪ್ರಥಮ ೬೧%	ಕಿರುವಚನಕಾರ್ತಿಯರು ಒಂದು ಅಧ್ಯಯನ	ಡಾ॥ ಪಿ. ವಿ. ನಾರಾಯಣ
೭	ಮಧು ಆರ್. ಎಸ್.	೩೩೭	ಪ್ರಥಮ ೭೦%	ಡಾ. ಗೀತಾನಾಗಭೂಷಣರವರ 'ಬದುಕು' ಕಾದಂಬರಿಯಲ್ಲಿ ಸಾಮಾಜಿಕ ಪ್ರಜ್ಞೆ-ಒಂದು ಅಧ್ಯಯನ	ಡಾ. ವಿಜಯಾ ಸುಬ್ಬರಾಜ್
೮.	ಕುಸುಮ ಬಿ. ಎಂ.	೩೧೯	ಪ್ರಥಮ ೬೯%	ವೈದೇಹಿಯವರ ಸಾಹಿತ್ಯ ಮತ್ತು ಸ್ತ್ರೀ ಸಂಸ್ಕೃತಿ	ಡಾ॥ ಆರ್. ಲಕ್ಷ್ಮಿನಾರಾಯಣ್
೯.	ಮೋಹನ್‌ರಾವ್ ಸಿ. ಎನ್.	೩೨೦	ಪ್ರಥಮ ೭೦%	'ಪಿ. ಲಂಕೇಶ್ ಕಥೆಗಳು' ಒಂದು ಅಧ್ಯಯನ	ಪ್ರೊ॥ ಕೆ.ಎಸ್. ಮಧುಸೂದನ
೧೦.	ರೇಖಾ ಜೆ. ಎಲ್.	೩೩೧	೬೬% ೬೬%	'ಮೊಗಳ್ಳಿ ಗಣೇಶ್ ಅವರ ಸಣ್ಣ ಕಥೆಗಳಲ್ಲಿ ಜಾನಪದ ಪ್ರೇರಣೆ'	ಪ್ರೊ॥ ಡಿ. ಲಿಂಗಯ್ಯ
೧೧.	ತಾರಾಮಣಿ ಆರ್.	೩೫೧ ೭೩%	ಉನ್ನತ ಶ್ರೇಣಿ	'ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರ ಕಥೆಗಳಲ್ಲಿ 'ಪ್ರಕೃತಿ ಮತ್ತು ಪರಿಸರ'	ಪ್ರೊ॥ ಕೆ.ಎಸ್. ಮಧುಸೂದನ
೧೨.	ದೇವರಾಜು ಕೆ. ಜಿ.	೩೪೨	ಪ್ರಥಮ ೭೩%	ಕುಂ.ವೀ. ಅವರ ಅರಮನೆ ಕುರಿತು ಒಂದು ಅಧ್ಯಯನ.	ಡಾ. ವಿಜಯಾ ಸುಬ್ಬರಾಜ್
೧೩.	ಕೆ. ಬಸವರಾಜಪ್ಪ ೨೦೦೮-೨೦೦೯	೩೬೦	ಪ್ರಥಮ ೭೨%	ಕನ್ನಡ ಹಸ್ತಪ್ರತಿಗಳಲ್ಲಿ ಪತ್ರ ಸಾಹಿತ್ಯ-ಒಂದು ಅಧ್ಯಯನ	ಡಾ. ನಾ ಗೀತಾಚಾರ್ಯ

ಮೂರು ಜನ ವಿದ್ಯಾರ್ಥಿಗಳು **ಉನ್ನತ ಶ್ರೇಣಿಯಲ್ಲಿ** ಮತ್ತು ಉಳಿದ ವಿದ್ಯಾರ್ಥಿಗಳು **ಪ್ರಥಮ ದರ್ಜೆಯಲ್ಲಿ** ತೇರ್ಗಡೆ ಹೊಂದಿದ್ದಾರೆ. ನಮ್ಮ ಕೇಂದ್ರದಿಂದ ಸೈಯದ್ ಮುಯಿನ್ ಅತಿ ಹೆಚ್ಚಿನ ಅಂಕ ಗಳಿಸಿ ಶೇ. ೭೬.೨%ರಷ್ಟು ಫಲಿತಾಂಶ ಗಳಿಸಿದ್ದಾರೆ.
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಮೇಲ್ಕಂಡವರಿಗೆ ಹಾರ್ದಿಕ ಅಭಿನಂದನೆ ಸಲ್ಲಿಸುತ್ತಿದೆ.

ಡಾ॥ ವಿಜಯಾ ಸುಬ್ಬರಾಜ್, ನಿರ್ದೇಶಕರು,
ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು
ಪಿಎಚ್.ಡಿ ೨೦೦೯–೧೦ನೇ ಸಾಲಿನಲ್ಲಿ ಪದವಿ ಪಡೆದಿರುವವರು

ಕ್ರ.ಸಂ.	ಹೆಸರು	ನಿಬಂಧ ಶೀರ್ಷಿಕೆ	ಮಾರ್ಗದರ್ಶಕರು	ವರ್ಷ	ಫಲಿತಾಂಶ
೧.	ಡಾ. ಮಂಜುನಾಥ ಎನ್.	ಬೆಂಗಳೂರು ನಗರ ಜಿಲ್ಲೆಯ ಸ್ಥಳನಾಮಗಳು : ಒಂದು ಸಾಮಾಜಿಕ-ಭಾಷಿಕ ಅಧ್ಯಯನ	ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ	೨೦೧೦	ಅತ್ಯುತ್ತಮ
೨.	ಡಾ. ಎಚ್. ವಿ. ರವೀಶ್	ಆಧುನಿಕ ಕನ್ನಡ ಮಹಾಕಾವ್ಯಗಳಲ್ಲಿ ರಾಮಾಯಣದ ಕಥಾಂತರಗಳು	ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ	೨೦೧೦	ಉತ್ತಮ
೩.	ಡಾ. ಬಿ.ಎಸ್. ಮಂಜುನಾಥಸ್ವಾಮಿ	ವಚನ ಚಳುವಳಿ – ಆಂತರಿಕ ವೈರುಧ್ಯಗಳು	ಡಾ. ಪಿ. ವಿ. ನಾರಾಯಣ	೨೦೧೦	ಉತ್ತಮ
೪.	ಡಾ. ಮುತ್ತುರಾಜು	ಮುತ್ತತ್ತಿ : ಒಂದು ಸಾಂಸ್ಕೃತಿಕ ಅಧ್ಯಯನ	ಪ್ರೊ. ಡಿ. ಲಿಂಗಯ್ಯ	೨೦೧೦	ಉತ್ತಮ
೫.	ಡಾ. ಲಕ್ಷ್ಮೀ ವಿ.	ತುಳುನಾಡಿನ ನಾಗಬ್ರಹ್ಮ ಮತ್ತು ಕಂಬಳ– ಒಂದು ವಿಶ್ಲೇಷಣಾತ್ಮಕ ಅಧ್ಯಯನ	ಡಾ. ಎಸ್. ನಾಗರಾಜು	೨೦೧೦	ಉತ್ತಮ
೬.	ಡಾ. ಅನಂತಪದ್ಮನಾಭ ಕೆ. ವಿ.	ದಕ್ಷಿಣ ಕರ್ನಾಟಕದ ಕನ್ನಡ ಶಾಸನಗಳಲ್ಲಿ ಸಾಹಿತ್ಯ ಮೌಲ್ಯ	ಡಾ. ಕೆ. ವಿ. ರಮೇಶ್	೨೦೧೦	ಅತ್ಯುತ್ತಮ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಮೇಲ್ಕಂಡವರಿಗೆ ಹಾರ್ದಿಕ ಅಭಿನಂದನೆ ಸಲ್ಲಿಸುತ್ತಿದೆ.



ಎಂ.ವಿ.ಸೀ. ಪುರಸ್ಕಾರ ಪ್ರಧಾನ ಮತ್ತು ಎಂ.ಫಿಲ್ಸ್– ಪಿಎಚ್.ಡಿ. ಪದವಿ ಪತ್ರ ಪ್ರಧಾನ ಕಾರ್ಯಕ್ರಮ



೨೬–೩–೨೦೧೧ರಂದು ಧರ್ಮಸ್ಥಳದ ಉಜಿರೆಯಲ್ಲಿ ನಡೆದ ಪ್ರಥಮ ರಾಷ್ಟ್ರೀಯ ಹಸ್ತಪ್ರತಿ ಸಮಾವೇಶದಲ್ಲಿ ಸರ್ವಾಧ್ಯಕ್ಷ ಡಾ. ಸಣ್ಣಯ್ಯ ಅವರಿಗೆ ಸನ್ಮಾನ ಸಮಾರಂಭ



೨೬–೩–೨೦೧೧ರಂದು ಉಜಿರೆಯಲ್ಲಿ ನಡೆದ ಪ್ರಥಮ ರಾಷ್ಟ್ರೀಯ ಹಸ್ತಪ್ರತಿ ಸಮಾವೇಶದ ಪ್ರತಿನಿಧಿಗಳು

ಪ್ರಥಮ ರಾಷ್ಟ್ರೀಯ ಹಸ್ತಪ್ರತಿ ಸಮಾವೇಶ

೨೬-೩-೧೧ ಶನಿವಾರ ಬೆಳಗ್ಗೆ ೧೦-೦೦ ರಿಂದ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಡಾ. ಹಾ.ಮಾ.ನಾ. ಸಂಶೋಧನ ಕೇಂದ್ರ ಮತ್ತು ಕನ್ನಡ ವಿಭಾಗ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯತ್ತ ಮಹಾವಿದ್ಯಾಲಯ ಉಜಿರೆ ಸಂಯುಕ್ತವಾಗಿ ಎಂ.ವಿ.ಸೀ. ಶತಮಾನೋತ್ಸವ-ಪ್ರಥಮ ರಾಷ್ಟ್ರೀಯ ಹಸ್ತಪ್ರತಿ ಸಮಾವೇಶವನ್ನು ನಡೆಸಲಾಯಿತು.

ಶ್ರೀ ಸಿದ್ಧವನ ಗುರುಕುಲ ಉಜಿರೆಯಲ್ಲಿ ನಡೆದ ಈ ಸಮಾವೇಶದ ಉದ್ಘಾಟನೆಯನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರ ಅನುಪಸ್ಥಿತಿಯಲ್ಲಿ ಸರ್ವಾಧ್ಯಕ್ಷಕರಾದ ಪ್ರೊ. ಬಿ. ಎಸ್. ಸಣ್ಣಯ್ಯ ಮತ್ತು ಎಸ್.ಡಿ.ಎಂ. ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ. ಯಶೋವರ್ಮರವರು ದೀಪಬೆಳಗುವ ಮುಖೇನ ಉದ್ಘಾಟಿಸಿದರು. ಡಾ. ನಾ. ಗೀತಾಚಾರ್ಯ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಪ್ರೊ. ಬಸವಾರಾಧ್ಯ, 'ಸಿರಿಕಂಟ' ಕುರಿತು ಮಾತನಾಡಿದರು. ಶ್ರೀ ಎಸ್. ವಿ. ಶ್ರೀನಿವಾಸರಾವ್ ಸರ್ವರನ್ನೂ ಸ್ವಾಗತಿಸಿದರು. ಅತಿಥಿಗಳಿಗೆ ಶ್ರೀ ದಿವ ಪೊಕ್ಕಡ ಹೂಗುಚ್ಛ ನೀಡಿದರು. ಡಾ. ಬಿ. ವಿ. ಸಂಪತ್‌ಕುಮಾರ್ ಕಾರ್ಯಕ್ರಮ ನಿರೂಪಿಸಿದರು. ಪ್ರೊ. ಬಿ. ಎಸ್. ಸಣ್ಣಯ್ಯ ಅವರು ಮಾತನಾಡಿ ಈ ಸಮಾವೇಶದ ಮಹತ್ವವನ್ನು ನಿರೂಪಿಸಿದರು. 'ಸಿರಿಕಂಟ' ವಿಶೇಷ ಸಂಪುಟದ ಸಂಪಾದಕರಾದ ಪ್ರೊ. ಬಸವಾರಾಧ್ಯ ಅವರು ಈ ಸಂಕಲನದಲ್ಲಿನ ವಿಶೇಷ ಲೇಖನಗಳ ಮೇಲೆ ಬೆಳಕು ಚೆಲ್ಲಿದರು. ಹಸ್ತಪ್ರತಿಶಾಸ್ತ್ರ ಹಾಗೂ ಅದರ ಮಹತ್ವದ ಬಗ್ಗೆ ಮಾತನಾಡಿ ಈ ಗ್ರಂಥ ಈ ಬಗ್ಗೆ ಮಾಹಿತಿ ನೀಡುವ ವಿಶೇಷ ಮೌಲಿಕ ಗ್ರಂಥವಾಗಲಿದೆ ಎಂದು ಹೇಳಿದರು. ಡಾ॥ ಎಸ್. ಡಿ. ಶೆಟ್ಟಿ ಅವರು ವಂದನಾರ್ಪಣೆ ಮಾಡಿದರು.

ಈ ಉದ್ಘಾಟನಾ ಸಮಾರಂಭದ ನಂತರ ಗೋಷ್ಠಿ ಕಾರ್ಯಕ್ರಮಗಳು ಸುಮಾರು ೧೨ ಗಂಟೆಗೆ ಪ್ರಾರಂಭಗೊಂಡವು.

ಈ ಗೋಷ್ಠಿಗಳ ಪ್ರಾರಂಭದಲ್ಲಿ ಡಾ. ನಾ. ಗೀತಾಚಾರ್ಯ ಅವರು ಈ ಗೋಷ್ಠಿಗಳಲ್ಲಿ ಮಂಡಿತವಾಗಲಿರುವ ಪ್ರಬಂಧಗಳ ಪ್ರಾಮುಖ್ಯತೆಯನ್ನು ಹೇಳಿ ಈ ಎಲ್ಲಾ ಗೋಷ್ಠಿಗಳಲ್ಲಿ ಮಂಡಿತವಾಗಲಿರುವ ಟಿಪ್ಪಣಿಗಳನ್ನು ಮುಂದಿನ ಹಸ್ತಪ್ರತಿ ಸಮಾವೇಶದಲ್ಲಿ ಗ್ರಂಥರೂಪದಲ್ಲಿ ಪ್ರಕಟಿಸಲಾಗುವುದೆಂದೂ ಆದ್ದರಿಂದ ಈ ಟಿಪ್ಪಣಿ ರೂಪದಲ್ಲಿ ಮಂಡಿತವಾಗಲಿರುವ ಪ್ರಬಂಧಗಳನ್ನು ವಿಸ್ತೃತವಾಗಿ ಬರೆದು ಪ್ರತಿಷ್ಠಾನಕ್ಕೆ ಕಳುಹಿಸಿಕೊಡಬೇಕೆಂದು ತಿಳಿಸಿದರು.

ಮೊದಲನೆಯ ಗೋಷ್ಠಿಯ ಅಧ್ಯಕ್ಷತೆಯನ್ನು ಖ್ಯಾತ ಹಸ್ತಪ್ರತಿ ತಜ್ಞೆ ಡಾ. ವೈ. ವಿ. ಭಾನುಮತಿ ವಹಿಸಿದ್ದರು. ಈ ಗೋಷ್ಠಿಯಲ್ಲಿ ಶ್ರೀ ವೇಮಗಲ್ ಮೂರ್ತಿ, ಡಾ. ಕೆ. ನರ್ಮದಾಂಬ; ಡಾ. ಶ್ಯಾಮಲಾರತ್ನಕುಮಾರಿ, ಡಾ. ಜಿ. ಕೆ. ದೇವರಾಜ್‌ಸ್ವಾಮಿ ; ಡಾ. ನಾ. ಗೀತಾಚಾರ್ಯ ಅವರು ಬರೆದಿರುವ ಪ್ರಬಂಧದ ಬಗ್ಗೆ ಟಿಪ್ಪಣಿ ಮಂಡಿಸಿದರು. ಕೊನೆಯಲ್ಲಿ ಡಾ. ಭಾನುಮತಿಯವರೂ ಒಂದು ಪ್ರಬಂಧ ಮಂಡಿಸಿ, ಅಧ್ಯಕ್ಷೀಯ ಭಾಷಣದಲ್ಲಿ ಎಲ್ಲಾ ಟಿಪ್ಪಣಿಗಳ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸಿದರು.

೨ನೇ ಗೋಷ್ಠಿಯ ಅಧ್ಯಕ್ಷತೆಯನ್ನು, ಡಾ. ಕೆ. ಎಸ್. ಎನ್. ಉಡುಪ ವಹಿಸಿದ್ದರು. ಈ ಗೋಷ್ಠಿಯಲ್ಲಿ ಡಾ. ಕೆ.ವಿ. ಪದ್ಮನಾಭ, ಶ್ರೀ ಪ್ರವೀಣ್‌ಕುಮಾರ್, ಶ್ರೀಮತಿ ಉಷಾರಾಣಿ, ವಿ. ಸಂಧ್ಯಾ, ಗಂಗಾಂಬಿಕೆ, ಮತ್ತು ಸೈಯದ್ ಮೊಯಿನ್ ತಮ್ಮ ಪ್ರಬಂಧಗಳಿಗೆ ಸಂಬಂಧಿಸಿದಂತೆ ಟಿಪ್ಪಣಿ ಮಂಡಿಸಿದರು. ಸು. ಹ. ಗೋವರ್ಧನ್, ನಿರೂಪಿಸಿದರು.

೩ನೇ ಗೋಷ್ಠಿ ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದರಲ್ಲಿ ಡಾ. ಪಿ. ವಿ. ಕೃಷ್ಣಮೂರ್ತಿ, ಡಾ. ಬಿ. ರಾಜಶೇಖರಪ್ಪ, ನಂಜುಂಡಸ್ವಾಮಿ ಮುಂತಾದವರು ಟಿಪ್ಪಣಿ ಮಂಡಿಸಿದರು. ವಿ. ಸೋಮಶೇಖರ್ ನಿರೂಪಣೆ ಮಾಡಿದರು.

ಈ ಮೂರು ಗೋಷ್ಠಿಗಳು ಮುಗಿದ ನಂತರ ಸರ್ವಾಧ್ಯಕ್ಷ ಡಾ. ಬಿ. ಎಸ್. ಸಣ್ಣಯ್ಯ ಅವರಿಗೆ ಗೌರವಾರ್ಪಣೆಯು ಅಧ್ಯಕ್ಷ ಡಾ. ಬಿ. ಯಶೋವರ್ಮ, ಪ್ರೊ. ಬಸವಾರಾಧ್ಯ, ಶ್ರೀ ಎಸ್. ವಿ. ಶ್ರೀನಿವಾಸರಾವ್ ಅವರ ಸಮ್ಮುಖದಲ್ಲಿ ನಡೆಯಿತು. ಎಸ್.ಡಿ.ಎಂ. ಕಾಲೇಜಿನ ಪ್ರಾಂಶುಪಾಲರು ಡಾ. ಬಿ. ಯಶೋವರ್ಮ ಮತ್ತು ಶ್ರೀ ಎಸ್. ವಿ. ಶ್ರೀನಿವಾಸರಾವ್ ಅವರು ಸರ್ವಾಧ್ಯಕ್ಷರಿಗೆ ಶಾಲು ಹೊದಿಸಿ, ಫಲಕ ನೀಡಿ ಗೌರವಾರ್ಪಣೆ ಮಾಡಿದರು. ಅನಂತರ ದೀರ್ಘವಾಗಿ ಮಾತನಾಡಿದ ಡಾ. ಸಣ್ಣಯ್ಯ ಹಸ್ತಪ್ರತಿಗಳ ಪ್ರಾಮುಖ್ಯತೆ, ಸಂರಕ್ಷಣೆ, ಸಂಪಾದನೆಯ ಬಗ್ಗೆ ಮಾಹಿತಿ ನೀಡಿ ತಮ್ಮ ಅಪಾರ ಅನುಭವವನ್ನು ಎಲ್ಲರಿಗೂ ಪರಿಚಯಿಸಿದರು. ಪ್ರೊ. ಎನ್. ಬಸವಾರಾಧ್ಯ ಸಹ ಈ ಬಗ್ಗೆ ತಮ್ಮ ಅನುಭವದ ಹಿನ್ನೆಲೆಯಲ್ಲಿ ಹಸ್ತಪ್ರತಿಗಳ ಬಗ್ಗೆ ಮೌಲಿಕ ಮಾಹಿತಿಯನ್ನು ನೀಡಿ ಅವುಗಳ ಸಂಪಾದನೆಯಲ್ಲಿ ಅನುಸರಿಸಬೇಕಾದ ನೀತಿ ನಿಯಮಗಳನ್ನು ವಿವರಿಸಿದರು. ಡಾ. ಬಿ. ಯಶೋವರ್ಮ ಈ ಸಮಾವೇಶವನ್ನು ಉಜಿರೆಯಲ್ಲಿ ನಡೆಸಿದ ಬಗ್ಗೆ ಪ್ರತಿಷ್ಠಾನಕ್ಕೆ ಅಭಿಮಾನಪೂರ್ವಕ ಮೆಚ್ಚಿಗೆ ವ್ಯಕ್ತಪಡಿಸಿದರು. ಡಾ. ನಾ. ಗೀತಾಚಾರ್ಯ ಅವರು ಮಾತನಾಡಿ ಈ ಸಮಾವೇಶವನ್ನು ಬಹಳ ಅಚ್ಚುಗಟ್ಟಾಗಿ ನಡೆಸಲು ಶ್ರಮಿಸಿರುವ ಉಜಿರೆ ಕಾಲೇಜಿನ ಪ್ರಾಂಶುಪಾಲರು, ಅಧಿಕಾರವರ್ಗ, ಉಪನ್ಯಾಸವರ್ಗ ವಿದ್ಯಾರ್ಥಿಗಳಿಗೆ ಅಭಾರಮನ್ನಣೆ ಸಲ್ಲಿಸಿದರು. ಎಸ್.ವಿ. ಶ್ರೀನಿವಾಸರಾಯರು ಎಲ್ಲಾ ಗೋಷ್ಠಿಯ ಪ್ರಬಂಧ ಮಂಡಿಸಿದ ವಿದ್ವಾಂಸರುಗಳಿಗೆ ಪ್ರತಿಷ್ಠಾನದ ಗ್ರಂಥ ನೀಡಿ ಪುರಸ್ಕರಿಸಿದರು.

ದತ್ತಿನಿಧಿ ಸ್ಪರ್ಧೆಗಳು

೧. ಸಾವಿತ್ರಮ್ಮ ದತ್ತಿ-ಮಕ್ಕಳ ಸಾಹಿತ್ಯ ಪ್ರಶಸ್ತಿ-೨೦೦೯ : ಇತ್ತೀಚೆಗೆ ನಡೆದ ಈ ಸ್ಪರ್ಧೆಯಲ್ಲಿ ಶ್ರೀಮತಿ ಶಾರದಾ ವಿ. ಮೂರ್ತಿ ಅವರು ರಚಿಸಿರುವ 'ಮಾತನಾಡಿ ಗೊಂಬೆಗಳೆ' ಕೃತಿ ಆಯ್ಕೆಗೊಂಡಿದೆ. ಲೇಖಕಿಯವರಿಗೆ ಹಾರ್ದಿಕ ಅಭಿನಂದನೆಗಳು.

೨. ದತ್ತಿ ನಿಧಿ ಸ್ಪರ್ಧೆಗೆ ಗ್ರಂಥಗಳ ಆಹ್ವಾನ

(ಅ) ಶಾರದಮ್ಮ ಜಿ. ಹನುಮಯ್ಯ ಪುಸ್ತಕ ಬಹುಮಾನ ೨೦೦೯-೧೦ ಗ್ರಂಥಗಳನ್ನು ಕಳುಹಿಸುವ ದಿನಾಂಕವನ್ನು ಮೇ ೩೦, ೨೦೧೧ ರ ವರೆಗೆ ವಿಸ್ತರಿಸಲಾಗಿದೆ.

(ಆ) ದಿ॥ ಪುಟ್ಟಚ್ಚಮ್ಮ-ವೆಂಕಟರಾಮಯ್ಯ ಕಾದಂಬರಿ ಸ್ಪರ್ಧೆ ೨೦೦೯-೧೦. ಗ್ರಂಥಗಳನ್ನು ಕಳುಹಿಸುವ ದಿನಾಂಕವನ್ನು ಮೇ ೩೦. ೨೦೧೧ ರ ವರೆಗೆ ವಿಸ್ತರಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವನ್ನು ಸಂಪರ್ಕಿಸುವುದು.

ಸಾದರ ಸ್ವೀಕಾರ

೧. **ವೈರುಧ್ಯಗಳ ಸಂತೆಯಲ್ಲಿ ಬೆಳದಿಂಗಳ ಹುಡುಗಾಟ:** ಲೇಖನಗಳ ಸಂಗ್ರಹ. ಪ್ರಕಟಣೆ, ಮಂಥನ, ನಂ. ೯೩\೧, ತಿಮ್ಮರಾಯ ರಸ್ತೆ, ಕೆಂಪೇಗೌಡ ನಗರ, ಬೆಂಗಳೂರು-೧೯. ಪ್ರಥಮ ಮುದ್ರಣ: ೨೦೧೦. ಪುಟಗಳು : ೯೨. ಬೆಲೆ : ರೂ. ೫೦\-.

೨. **ಬೆಂಗಳೂರು-ಬಾಸ್ಟನ್-ಬೆಂಗಳೂರು** : (ಪ್ರವಾಸ ಕಥನ) ಲೇಖಕರು : ಶ್ರೀ ಬಿ. ಎನ್. ಗುರುಮೂರ್ತಿ. ಪ್ರಕಾಶಕರು : ಸುಮುಖ ಪ್ರಕಾಶನ, ೧೭೪ ಇ/೨೮, ೧ನೇ ಮಹಡಿ, ೧ನೇ ಮುಖ್ಯರಸ್ತೆ, ವಿದ್ಯಾರಣ್ಯನಗರ, ಮಾಗಡಿ ರಸ್ತೆ, ಬೆಂಗಳೂರು-೨೩, ಪ್ರಕಟಣೆ : ೨೦೦೯. ಬೆಲೆ : ರೂ. ೯೦/-. ಪುಟಗಳು : ೧೩೨+೮=೧೪೦.

೩. **ಬೇಂದ್ರೆ-ಕಾಳಿದಾಸ, ಕಾವ್ಯಕಾರಣ** : (ಫೆಲೋಶಿಪ್ ಪಡೆದ ಕೃತಿ). ಲೇಖಕರು : ವೀಣಾ ಕುಲಕರ್ಣಿ. ಪ್ರಕಟಣೆ : ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ. ಪ್ರಕಟಣೆ : ೨೦೦೮. ಪುಟಗಳು : XV+೨೬೬. ಬೆಲೆ ರೂ. ೧೦೦\- ಉತ್ತಮ ಪ್ರತಿ ರೂ. ೧೫೦\-.

೪. **ಲಾಡ ಜನಾಂಗದ ನೆಲೆ ಹಾಗೂ ಸಂಸ್ಕೃತಿ** : (ಸಂಶೋಧನಾತ್ಮಕ ಕೃತಿ). ಲೇಖಕರು : ಜಯಪ್ರಕಾಶ್. ಎನ್. ಡಿ. ಲಾಡ್. ಪ್ರಕಟಣೆ : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು-೨. ಮೊದಲ ಮುದ್ರಣ. ಪುಟಗಳು : X+೧೩೮. ಬೆಲೆ : ರೂ. ೫೮.

೫. **ಬಬ್ಬೂರುಕಮ್ಮೆ ಯಶೋಡಿಂಡಿಮ** : ಲೇಖಕರು : [illegible]ಸ್. ಕಪನೀಪತಯ್ಯ, ಮೈಸೂರು. ಪ್ರಕಾಶಕರು : ಬಿ. ಕೆ. ಶ್ರೀಕಂಠಯ್ಯ ಮತ್ತು ಎಂ. ಎಸ್. ಶಿವರಾಮ್, ೫೬೩/೧, ೨ನೇ ರಾಮಚಂದ್ರ ಅಗ್ರಹಾರ, ಮೈಸೂರು-೫೭೦೦೦೪, ಉಚಿತ ವಿತರಣೆಗಾಗಿ ಮಾತ್ರ. ಪ್ರಕಟಣೆ : ೨೦೧೦.

೬. **ದೇವಲಾಪುರದ ಇತಿಹಾಸ** : ಲೇಖಕರು ಜಿ.ಸಿ. ಶಿವರಾಮಶರ್ಮ. ಪ್ರಕಟಣೆ : ಶ್ರೀ ಭದ್ರಕಾಳೀ ಸಮೇತ ಶ್ರೀ ವೀರಭದ್ರಸ್ವಾಮಿ ಪ್ರತಿಷ್ಠಾನ. ದೇವಲಾಪುರದ ಅಂಚೆ, ತುಮಕೂರು ತಾಲ್ಲೂಕು ಬೆಲೆ : ರೂ. ೪೦/- ಪುಟಗಳು : ೫೫.

೭. **ಶ್ರೀ ಟಿ. ವಿ. ವೆಂಕಟರಮಣಯ್ಯ ಸಂಪಾದಿಸಿರುವ ಮೌಲಿಕ ಪುಸ್ತಿಕೆಗಳು** : (೧) ಹೀಗಿದ್ದರು ಸ್ವಾಮಿ ವಿವೇಕಾನಂದರು (೨) ಬಲೂಪಯೋಗಿ ಜೇನು, ತುಳಸಿ, ನಿಂಬೆ. (೩) ಕೆಲವು ಸಾಂಸ್ಕೃತಿಕ ಆಚರಣೆಗಳು. (೪) ಸಂಸಾರ. (೫) ಹೀಗಿದ್ದರು ಲಾಲ್‌ಬಹಾದ್ದೂರ್‌ಶಾಸ್ತ್ರಿ. (೬) ದ್ವೇಷ. (೭) ಅಸೂಯೆ. (೮) ಒಳಿತು ಕೆಡುಕು. (೯) ಸೇವೆ (೧೦) ಜಗತ್ತು. (೧೧) ಹಳತು-ಹೊಸತು. ಮೊದಲ ಮುದ್ರಣ : ೨೦೧೦. ಬೆಲೆ : ಸದುಪಯೋಗ ಪ್ರಕಟಣೆ.

ಪ್ರತಿಗಳಿಗೆ ವಿಳಾಸ:

ಟಿ. ವಿ. ವೆಂಕಟರಮಣಯ್ಯ, ಇ.ವಿ.ಎಸ್. ೨೧೮, ಕೆ.ಎಚ್.ಬಿ. ಕಾಲೋನಿ. ೨ನೇ ಹಂತ, ೫ನೇ ಕ್ರಾಸ್, ಬೆಂಗಳೂರು-೫೬೦ ೦೭೯.

ಶ್ರದ್ಧಾಂಜಲಿ

೨೪-೧-೨೦೧೧ ಖ್ಯಾತ ಹಿಂದೂಸ್ತಾನಿ ಗಾಯಕ **ಪಂಡಿತ ಡಾ. ಭೀಮಸೇನ ಜೋಶಿ** (ಜೀವಿತಕಾಲ: ೧೯೨೨-೨೦೧೧). ಪುಣೆಯಲ್ಲಿ ನಿಧನರಾದರು. ಇವರು ಭಾರತರತ್ನ, ಪದ್ಮಭೂಷಣ, ಪ್ರಶಸ್ತಿಗೆ ಭಾಜನರಾಗಿದ್ದರು. ಶ್ರೀಯುತರಿಗೆ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತದೆ.

ತೆರೆದ-ಅಂಚೆ

ಅಚ್ಚಾದ ಪುಸ್ತಕ

ಶ್ರೀಮತಿ/ಶ್ರೀ...

....

....

ವಿಳಾಸ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬಿ.ಎಂ.ಶ್ರೀ. ಕಲಾಭವನ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೧೯
ದೂರವಾಣಿ : ೨೬೬೧೫೮೭೭

ಮುದ್ರಕರು : ಇಳಾ ಮುದ್ರಣ, ನಂ. ೩೬, ೪೦ ಅಡಿ ರಸ್ತೆ, ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಬೆಂಗಳೂರು - ೨೬ ✆ : ೨೬೭೫೭೧೯೯
'ವಾರ್ತಾಪತ್ರ' ಪ್ರಾಯೋಜಕರು: ಇಳಾ ಮುದ್ರಣ, ಬೆಂಗಳೂರು-೨೬.